ಮಂಗಳೂರುರವರಿಗೆ ರೂ.385.91 ಲಕ್ಷ ಮತ್ತು ಮೀನುಗಾರಿಕೆ ಉಪ ನಿರ್ದೇಶಕರು, ಕಾರವಾರ ರವರಿಗೆ ರೂ.88.41 ಲಕ್ಷ ಬಿಡುಗಡೆ ಮಾಡಲು ಹಾಗೂ ಸದರಿ ಅಧಿಕಾರಿಗಳು ಈ ಮೊತ್ತವನ್ನು ಮುಂಗಡ ಮೊತ್ತವಾಗಿ ವಿವರಗಳನ್ನು ಸಲ್ಲಿಸಿರುವ ಮೀನುಗಾರಿಕೆ ದೋಣಿಗಳ ಮಾಲೀಕರ ಬ್ಯಾಂಕು ಖಾತೆಗೆ ಆರ್.ಟಿ.ಜಿ.ಎಸ್. ಮುಖಾಂತರ ವರ್ಗಾಯಿಸಲು ಮಂಜೂರಾತಿ ನೀಡುವಂತೆ ಕೋರುತ್ತಾ, ಈ ಯೋಜನೆಯಡಿ ಉಂಟಾಗುವ ವೆಚ್ಚವನ್ನು 2015-16ನೇ ಸಾಲಿನ ಲೆಕ್ಕ ಶೀರ್ಷಿಕೆ 2405-00-103-0-23-059-ಇತರೆ ಖರ್ಚುಗಳು-422-ಪರಿಶಿಷ್ಠಜಾತಿ ಉಪ ಯೋಜನೆ ಯಡಿ ಒದಗಿಸಿರುವ ಅನುದಾನದಿಂದ ಭರಿಸಬಹುದಾಗಿದೆ ಎಂದು ನಿರ್ದೇಶಕರು ತಿಳಿಸಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ 68 ಮೀಇಯೋ 2015(ಭಾಗ-3), ಬೆಂಗಳೂರು ದಿನಾಂಕ: 20-07-2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, "ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ - ಮಾರಾಟ ತೆರಿಗೆ ಮರುಪಾವತಿ" ಯೋಜನೆಯಡಿ ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳ ಮಾಲೀಕರ ಬ್ಯಾಂಕ್ ಖಾತೆಗೆ ಸಹಾಯಧನ ಮುಂಗಡ ನೀಡುವ ಸಲುವಾಗಿ, 2015-16ನೇ ಸಾಲಿನ ಲೆಕ್ಕ ಶೀರ್ಷಿಕೆ 2405-00-103-0-23-059-ಇತರೆ ಖರ್ಚುಗಳು ಅಡಿ ರೂ.465.14 ಲಕ್ಷ (ನಾಲ್ಕುನೂರ ಅರವತ್ತೈದು ಲಕ್ಷದ ಹದಿನಾಲ್ಕು ಸಾವಿರ ರೂಪಾಯಿಗಳು ಮಾತ್ರ)ಗಳು ಹಾಗೂ ಲೆಕ್ಕ ಶೀರ್ಷಿಕೆ 2405-00-103-0-23-422-ಪರಿಶಿಷ್ಟ ಜಾತಿ ಉಪ ಯೋಜನೆ ಅಡಿ ರೂ.9.18 ಲಕ್ಷ (ಒಂಬತ್ತು ಲಕ್ಷದ ಹದಿನೆಂಟು ಸಾವಿರ ರೂಪಾಯಿಗಳು ಮಾತ್ರ)ಗಳು ಹೀಗೆ ಆಗಸ್ಟ್ ತಿಂಗಳಿಗೆ ಅವಶ್ಯವಿರುವ ಒಟ್ಟು ಮೊತ್ತ ರೂ.474.32 ಲಕ್ಷ (ನಾಲ್ಕುನೂರ ಎಪ್ಪತ್ತನಾಲ್ಕು ಲಕ್ಷದ ಮೂವತ್ತೆರಡು ಸಾವಿರಗಳು ಮಾತ್ರ)ಗಳನ್ನು ಬಿಡುಗಡೆ ಮಾಡಿದೆ.

ಸದರಿ ಮೊತ್ತವನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರು ಎ.ಸಿ. ಬಿಲ್ಲುಗಳ ಮುಖಾಂತರ ಸೆಳೆದು, ಮೀನುಗಾರಿಕೆ ಉಪ ನಿರ್ದೇಶಕರು, ಮಂಗಳೂರುರವರಿಗೆ ರೂ.385.91 ಲಕ್ಷ ಮತ್ತು ಮೀನುಗಾರಿಕೆ ಉಪ ನಿರ್ದೇಶಕರು, ಕಾರವಾರ ರವರಿಗೆ ರೂ.88.41 ಲಕ್ಷ ಬಿಡುಗಡೆ ಮಾಡಲು ಅನುಮತಿ ನೀಡಲಾಗಿದೆ.

ಈ ಮೊತ್ತವನ್ನು ಮುಂಗಡ ಮೊತ್ತವಾಗಿ ವಿವರಗಳನ್ನು ಸಲ್ಲಿಸಿರುವ ಮೀನುಗಾರಿಕೆ ದೋಣಿಗಳ ಮಾಲೀಕರ ಬ್ಯಾಂಕು ಖಾತೆಗೆ ಆರ್.ಟಿ.ಜಿ.ಎಸ್. ಮುಖಾಂತರ ಮೀನುಗಾರಿಕೆ ಉಪ ನಿರ್ದೇಶಕರು, ಮಂಗಳೂರು ಹಾಗೂ ಮೀನುಗಾರಿಕೆ ಉಪ ನಿರ್ದೇಶಕರು, ಕಾರವಾರ ಇವರುಗಳು ವರ್ಗಾಯಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆ ಆದೇಶ ಸಂಖ್ಯೆ: ಎಫ್‌ಡಿ/02/ಟಿಎಫ್‌ಪಿ/2015 ದಿನಾಂಕ: 09-04-2015 ರಲ್ಲಿ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಯವರಿಗೆ ನೀಡಲಾಗಿರುವ ವಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

20/7/15

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

20/7/15
( ರಶ್ಮಿ ಶಿವಶಂಕರ ಪೋಳ )
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
( ಮೀನುಗಾರಿಕೆ )

20/7

ಇವರಿಗೆ:

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.
4) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ,
5) ಮೀನುಗಾರಿಕೆ ಉಪ ನಿರ್ದೇಶಕರು, ಮಂಗಳೂರು / ಕಾರವಾರ.
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-4.
7) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಂ / ಹೆಚ್ಚಿನ ಪ್ರತಿಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- "ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ - ಮಾರಾಟ ತೆರಿಗೆ ಮರುಪಾವತಿ" ಎಂಬ ಹೊಸ ಯೋಜನೆಯನ್ನು 2015-16ನೇ ಸಾಲಿನಿಂದ ಅನುಷ್ಠಾನಗೊಳಿಸುವ ಬಗ್ಗೆ - ಸಹಾಯಧನ ಮುಂಗಡ ನೀಡುವ ಕುರಿತು.

ಓದಲಾಗಿದೆ:- (1) ಆದೇಶ ಸಂಖ್ಯೆ: ಪಸಂಮೀ/68/ಮೀಇಯೋ/2015, ದಿನಾಂಕ: 01-04-2015 ಮತ್ತು ತಿದ್ದುಪಡಿ ದಿನಾಂಕ: 07-04-2015.
(2) ಪತ್ರ ಸಂಖ್ಯೆ: ಮೀನಿ/57/ಪಂಪಾಯೋ(1)/2015, ದಿನಾಂಕ: 17-07-2015.

******

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ, ಯಾಂತ್ರೀಕೃತ ಮೀನುಗಾರಿಕಾ ದೋಣಿಗಳು ಬಳಸುವ ಡೀಸೆಲ್ ಮೇಲೆ ಸಹಾಯಧನ ನೀಡಲು ಏಪ್ರಿಲ್-2015 ರ ತಿಂಗಳಿಗೆ ಅಗತ್ಯವಿರುವ ರೂ.1069.00 ಲಕ್ಷಗಳನ್ನು 2015-16ನೇ ಸಾಲಿನ ಯೋಜನಾ ಲೆಕ್ಕ ಶೀರ್ಷಿಕೆ 2405-00-103-0-23 ಅಡಿ ಬಿಡುಗಡೆ ಮಾಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಮೀನುಗಾರಿಕೆ ನಿರ್ದೇಶಕರ ಪತ್ರದಲ್ಲಿ, ಆಗಸ್ಟ್ ತಿಂಗಳಿಗೆ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳ ಮಾಲೀಕರ ಬ್ಯಾಂಕು ಖಾತೆಗೆ ಸಹಾಯಧನ ಮುಂಗಡ ನೀಡುವ ಸಲುವಾಗಿ ರೂ.1069.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಲಾಗಿತ್ತೆಂದು, ಆದರೆ ಯಾಂತ್ರೀಕೃತ ಮೀನುಗಾರಿಕಾ ದೋಣಿಗಳಿಗೆ ಮುಂಗಡ ಮೊತ್ತ ನೀಡಲು ಮಾರ್ಚ್, ಏಪ್ರಿಲ್ ಮತ್ತು ಮೇ 2015 ರ ಡೀಸಲ್ ಪ್ರಮಾಣದ ಸರಾಸರಿಯನ್ನು ಆಧರಿಸಿ, 6776 ಕಿ.ಲೀ.ಗಳಿಗೆ ರೂ.474.32 ಲಕ್ಷಗಳನ್ನು ಆಗಸ್ಟ್ ತಿಂಗಳಿಗೆ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಮುಂದುವರೆದು, ಮುಂಗಡ ಮೊತ್ತವನ್ನು ದಿನಾಂಕ: 01-04-2015 ರ ಆದೇಶದಲ್ಲಿ ಈಗಾಗಲೇ ಮಂಜೂರಾತಿ ನೀಡಿದಂತೆ ಈ ಮೊತ್ತವನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರು ಎ.ಸಿ. ಬಿಲ್ಲುಗಳ ಮುಖಾಂತರ ಸೆಳೆದು, ಮೀನುಗಾರಿಕೆ ಉಪ ನಿರ್ದೇಶಕರು,

# ಕರ್ನಾಟಕ ಸರ್ಕಾರ

ಸಂಖ್ಯೆ: ಪಸಂಮೀ 68 ಮೀಇಯೋ 2015 (ಭಾಗ-3)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ: 24-07-2015

MEF
24/7/15

## ತಿದ್ದುಪಡಿ

ಸಂಖ್ಯೆ: ಪಸಂಮೀ/68/ಮೀಇಯೋ/2015 (ಭಾಗ-3), ದಿನಾಂಕ: 20-07-2015 ರ ಆದೇಶ ಭಾಗದ ಕಂಡಿಕೆ-2 ರ 1 ಮತ್ತು 2ನೇ ಸಾಲಿನಲ್ಲಿ "ಎ.ಸಿ.ಬಿಲ್ಲುಗಳ" ಎಂಬುದರ ಬದಲಾಗಿ "ಡಿ.ಸಿ.ಬಿಲ್ಲುಗಳ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

24/7/15
(ರಶ್ಮಿ ಶಿವಶಂಕರ ಘೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

24/7/15

**ಇವರಿಗೆ:**

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.
4) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ,
5) ಮೀನುಗಾರಿಕೆ ಉಪ ನಿರ್ದೇಶಕರು, ಮಂಗಳೂರು / ಕಾರವಾರ.
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-4.
7) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಂ / ಹೆಚ್ಚಿನ ಪ್ರತಿಗಳು.